## ಅತಿಯಾದ ಇಂಗ್ಲಿಷ್

ಝೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಕಾಮಿಡಿ ಕಿಲಾಡಿಗಳು' ಹಾಸ್ಯ ಕಾರ್ಯಕ್ರಮದ ಮೂವರು ನಿರ್ಣಾಯಕರಲ್ಲಿ ಒಬ್ಬರಾಗಿರುವ ನಟಿ ರಕ್ಷಿತಾರವರು ಕಲಾವಿದರ ಅಭಿನಯದ ಕುರಿತು ಹೇಳುವಾಗ ಅತಿಯಾದ ಇಂಗ್ಲಿಷ್ ಬಳಸುತ್ತಾರೆ. ಕಲೆಯನ್ನು ಪ್ರದರ್ಶಿಸಿದ ಕಲಾವಿದರಿಗೆ ಅವರು ತಮ್ಮ ಬಗ್ಗೆ ಏನು ಹೇಳಿದರು ಎಂದು ಅರ್ಥವಾಗದೇ ಅವರ ಮುಖದಲ್ಲಿಯ ಭಾವನೆಯನ್ನು ನೋಡಿ ಅವರು ತಮ್ಮ ಬಗ್ಗೆ ಒಳ್ಳೆಯದನ್ನೇ ಏನನ್ನೊ ಹೇಳುತ್ತಿರಬೇಕು ಎಂದು ತಿಳಿದುಕೊಂಡು 'ಥ್ಯಾಂಕ್ಸ್ ಮೇಡಂ, ಥ್ಯಾಂಕ್ಯೂ ಮೇಡಂ' ಎಂದಷ್ಟೆ ಹೇಳುತ್ತಾರೆ.

ಕಲಾವಿದರ ಕುರಿತು ಹೇಳುವಾಗ ಅವರಿಗೆ ತಿಳಿಯುವ ಹಾಗೆ ಶುದ್ಧ ಕನ್ನಡದಲ್ಲಿಯೇ ಹೇಳಿದ್ದರೆ ಅದನ್ನು ಅರ್ಥ ಮಾಡಿಕೊಂಡು ಅವರು ಇನ್ನೂ ಹೆಚ್ಚು ಖುಷಿ ಪಡುತ್ತಿರಲಿಲ್ಲವೇ? ಹೆಚ್ಚಿನ ಕಲಾವಿದರೆಲ್ಲ ಕಲೆಯಲ್ಲಿ ಶ್ರೀಮಂತರೇ ಹೊರತು ಅವರೆಲ್ಲ ಹೆಚ್ಚಿಗೆ ಕಲಿತವರಲ್ಲ, ಪದವಿ ಪಡೆದಿದ್ದರೂ ಅವರಿಗೆ ಇಂಗ್ಲಿಷ್ ತಿಳಿದೇ ತಿಳಿಯುತ್ತದೆ ಎಂದು ಅರ್ಥವೇ? ನಟಿ ರಕ್ಷಿತಾರವರು ತಾನೊಬ್ಬ ಕನ್ನಡ ಕಾರ್ಯಕ್ರಮದ ಮೌಲ್ಯಮಾಪಕಿ ಎಂಬುದನ್ನು ಮರೆತು ಅತಿಯಾದ ಇಂಗ್ಲಿಷ್ ಬಳಸಿ ಹೇಳುವುದರಿಂದ ವೀಕ್ಷಕರಿಗೂ ತುಂಬಾ ಹಿಂಸೆಯಾಗುತ್ತದೆ.

–ದೇವಿದಾಸ ಸುವರ್ಣ, ಅಂಕೋಲಾ

## ನಕ್ಕರೆ ಸವಿನಿದ್ದೆಗೆ ಬರವಿಲ್ಲ!

ಕೆಲ ವರ್ಷಗಳ ಹಿಂದೆ ಅದೊಂದು ಕಾಲವಿತ್ತು. ಟಿ.ವಿ.ಯಲ್ಲಿ ರಾತ್ರಿ 10ರಿಂದ 11ರ ವೇಳೆಯಲ್ಲಿ ಬರೀ ಹಾಸ್ಯ ಧಾರಾವಾಹಿಗಳೇ ವಿಜೃಂಭಿಸುತ್ತಿದ್ದವು. ಸಿಹಿಕಹಿ ಚಂದ್ರುರವರ ತಿಳಿ ಹಾಸ್ಯದ ಪಾಪ ಪಾಂಡು, ಪಾಂಡುರಂಗ ವಿಠಲ, ಸಿಲ್ಲಿಲಲ್ಲಿ ಗಳನ್ನು ನೋಡಿ ಮನಸಾರೆ ನಕ್ಕು ಹಾಸಿಗೆ ಸೇರುತ್ತಿದ್ದೆವು. ರಾತ್ರಿ ಕನಸಿನಲ್ಲಿ ಸೊಗಸಾದ ಕ್ಯಾನ್ವಾಸ್ ಮೇಲೆ ಬಣ್ಣ ಬಣ್ಣದ ಭಿತ್ತಿಗಳ ಭಾವಲಹರಿ! ಮುಂದೆ ಅದೇಕೋ ಎಲ್ಲಾ ಹಾಸ್ಯ ಧಾರಾವಾಹಿಗಳೂ ಸ್ಥಗಿತಗೊಂಡು ಬರೀ ಕ್ರೈಂ, ಹೊಡಿಬಡಿ, ಭೂತಪ್ರೇತ, ಕೊಚ್ಚು, ಮಚ್ಚು, ಲಾಂಗು, ಗುಂಡುಗಳ ಮೊರೆತ ಆರಂಭವಾಯಿತು. ರಾತ್ರಿ ಕನಸಿನಲ್ಲಿ ದೆವ್ವಗಳು, ಕೊಲೆ. ಬೆಚ್ಚಿಬಿದ್ದು ಎದ್ದು ಕೂರುತ್ತಿದ್ದೆವು.

ಇದೀಗ ಪುನಃ ಕಲರ್ಸ್ ವಾಹಿನಿಯಲ್ಲಿ 'ಪಾಪ ಪಾಂಡು' ಆರಂಭವಾಗಿದೆ. ಈಗ ಕನಸಿನಲ್ಲಿ ಮತ್ತೆ ಅವರ್ಣನೀಯ ಭಾವ ಚಿತ್ತಾರಗಳು! ವೀಕ್ಷಕರಿಗೆ ನಿತ್ಯ ರಾತ್ರಿ ಸಿಹಿ ಉಣಿಸುತ್ತಿರುವ ಸಿಹಿಕಹಿ ಚಂದ್ರು ಬಳಗಕ್ಕೆ ಧನ್ಯವಾದಗಳು.

– ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ವಾರದ ಪತ್ರ

## ಗ್ರಹಣ: ಆತಂಕ ಹುಟ್ಟಿಸುವುದೇಕೆ?

ಸುಮಾರು ದಿನಗಳಿಂದ ಎಲ್ಲಾ ಸುದ್ದಿ ವಾಹಿನಿಗಳಲ್ಲೂ 27.7.18ರಂದು ನಡೆಯಲಿರುವ ಚಂದ್ರ ಗ್ರಹಣದ ಬಗ್ಗೆಯೇ ಅಬ್ಬರದ ಸುದ್ದಿಗಳು ಪ್ರಸಾರವಾಗುತ್ತಿವೆ. ಗ್ರಹಣ ಆಕಾಶದಲ್ಲಿ ನಡೆಯುವ ಒಂದು ಪ್ರಾಕೃತಿಕ ವಿದ್ಯಮಾನ. ಪ್ರತಿವರ್ಷ ಸುಮಾರು 7 ಗ್ರಹಣಗಳು ನಡೆಯುತ್ತವೆ ಎಂಬುದು ಖಗೋಳ ಶಾಸ್ತ್ರಜ್ಞರ ಲೆಕ್ಕಾಚಾರ. ಭೂಮಿಯು ತನ್ನ ಸುತ್ತ ಸುತ್ತುತ್ತಾ ಸೂರ್ಯನ ಸುತ್ತ ಸುತ್ತುತ್ತಾ ಇದ್ದರೆ, ಚಂದ್ರ ಭೂಮಿಯ ಸುತ್ತ ಸುತ್ತುತ್ತಾ, ಸೂರ್ಯನ ಸುತ್ತ ಸುತ್ತುತ್ತಾ ಇರುವಾಗ ಸೂರ್ಯ, ಭೂಮಿ, ಮತ್ತು ಚಂದ್ರ ಒಂದು ಸರಳ ರೇಖೆಯಲ್ಲಿ ಬಂದಾಗ ಗ್ರಹಣಗಳು ಸಂಭವಿಸುತ್ತವೆ. ಈ ಸಹಜ ಕ್ರಿಯೆಯನ್ನು ವಾಹಿನಿಗಳು ವೈಭವೀಕರಿಸಿ ಜನರಿಗೆ ಆತಂಕ ಮೂಡಿಸುತ್ತಾ ಇರುವುದು ಎಷ್ಟು ಸರಿ? ಹಿಂದೆ ನಡೆದ ಅನೇಕ ಪ್ರಕೃತಿ ವಿಕೋಪಗಳು ಮತ್ತು ಸಾವು– ನೋವುಗಳು ಗ್ರಹಣದಿಂದಲೇ ಆದವು ಎಂದು ತಾಳೆ ಹಾಕುತ್ತಾ ಸಾರ್ವಜನಿಕರನ್ನು ಹೆದರಿಸುವುದು ಯಾವ ನ್ಯಾಯ?

ಇದೇ ವಾಹಿನಿಗಳು ವಿಜ್ಞಾನಿಗಳನ್ನು, ಖಗೋಳ ಶಾಸ್ತ್ರಜ್ಞರನ್ನು ಕರೆಸಿ, ಅವರಿಂದ ವೈಜ್ಞಾನಿಕ ವಿಶ್ಲೇಷಣೆಗಳನ್ನು ಮಾಡಿಸಿ, ಜನರ ಆತಂಕವನ್ನು, ಭಯವನ್ನು ದೂರ ಮಾಡಬಹುದಲ್ಲವೇ?

–ಪಿ. ಚಂದ್ರಕಲಾ, ಬೆಂಗಳೂರು

## ಅತಿ ಸುಂದರ 'ಮಾನಸ ಸರೋವರ'

ಉದಯ ವಾಹಿನಿಯಲ್ಲಿ 'ಮಾನಸ ಸರೋವರ' ಧಾರಾವಾಹಿ ಸುಂದರವಾಗಿ ಮೂಡಿಬರುತ್ತಿದೆ. 100 ಕಂತುಗಳ ಸಂಭ್ರಮದಲ್ಲಿರುವ ಧಾರಾವಾಹಿಯ 50ನೇ ಕಂತಿನಿಂದ ನಿರ್ದೇಶನದ ಜವಾಬ್ದಾರಿ ಹೊತ್ತ ನಿರ್ದೇಶಕ ಬಿ.ಮಧುಸೂಧನ್, ಪುಟ್ಟಣ್ಣನವರ 'ಮಾನಸ ಸರೋವರ'ಕ್ಕೆ ನ್ಯಾಯ ಒದಗಿಸಿದ್ದಾರೆ. ಹಿರಿಯ ನಟ ಶ್ರೀನಾಥರ ಅಭಿನಯ ಇಡೀ ಧಾರಾವಾಹಿಗೆ ಮೆರುಗು ಕೊಟ್ಟಿದೆ.

– ವೀಣಾ ಅತ್ರೇಯ, ಬೆಂಗಳೂರು

## ರಸದೌತಣ

ಕನ್ನಡ ಕಲರ್ಸ್ ಸೂಪರ್ ಚಾನೆಲ್‌ನಲ್ಲಿ ಟಿ.ಎನ್. ಸೀತಾರಾಂ ಅವರ 'ಮಗಳು ಜಾನಕಿ' ಧಾರಾವಾಹಿ ವೀಕ್ಷಕರಿಗೆ ರಸದೌತಣ ಉಣಬಡಿಸುತ್ತಿರುವುದು ಸಂತಸದ ಸಂಗತಿ. ಇವರ ನಿರ್ದೇಶನದಲ್ಲಿ ಅನೇಕ ಮೌಲ್ಯಾಧಾರಿತ ವಿಷಯಗಳಿರುತ್ತವೆ. ಮಧ್ಯಮ ವರ್ಗದವರ ಸಂಸಾರ ಕುರಿತ ಕಥೆ ಜನರನ್ನು ಬಹು ಬೇಗ ತಲಪುವಲ್ಲಿ ಸಂಶಯವಿಲ್ಲ. ಸಹಜವಾದ ನಡೆ– ನುಡಿ, ವೇಷ– ಭೂಷಣ ಮತ್ತು ಕೇಶಾಲಂಕಾರ. ಎಚ್.ಎಸ್.ವೆಂಕಟೇಶ ಮೂರ್ತಿಯವರ ಹಾಡಿನ ಸಾಹಿತ್ಯವನ್ನು ವಿಜಯ ಪ್ರಕಾಶ್ ಧ್ವನಿಯಲ್ಲಿ ಆಲಿಸಲು ಹಿತವೆನಿಸುತ್ತದೆ. ಮನೆ ಮಂದಿಯೆಲ್ಲಾ ರಾತ್ರಿ 9:30 ಕ್ಕೆ ಟಿ.ವಿ ಮುಂದೆ ಹಾಜರ್.

-ಮಧುರ ಸುಬ್ರಹ್ಮಣ್ಯ, ಬೆಂಗಳೂರು

## ಸಣ್ಣ ತಪ್ಪೂ ತಪ್ಪೇ!

ಟಿ. ಎನ್.ಸೀತಾರಾಂ ಅವರು ಬ್ಯಾಟಿಂಗ್ ಮಾಡಲು ಈಗ ತಾನೆ ಕ್ರೀಸಿಗೆ ಬಂದಿದ್ದಾರೆ. ಬ್ಯಾಟಿಗಿಂತ ಪ್ಯಾಡಿಗೇ ಬಾಲು ತಗಲುತ್ತಿದೆ. ಅಪೀಲ್‌ಗಳೂ ಆಗುತ್ತಿವೆ. 'ಮಗಳು ಜಾನಕಿ'ಯಲ್ಲಿ ನನಗೆ ಕಂಡ ಎರಡು ಉದಾಹರಣೆಗಳು ಹೀಗಿವೆ.

1. ಚಂದು ಬಾರ್ಗಿಯನ್ನು ಬಂಧಿಸಲು ಪೊಲೀಸ್ ಬಂದಾಗ ಆತ ತಾನು ಮುಖ್ಯಮಂತ್ರಿಯ ಆಪ್ತನಾಗಿರುವುದಾಗಿ ಕೊಚ್ಚಿಕೊಂಡು ಅವರಿಗೆ ಫೋನ್ ಮಾಡಲು ಪಿಎಗೆ ಹೇಳುತ್ತಾನೆ. ಆಗ ಆಕೆ ಫೋನ್ ಮಾಡಿ ಬಂದು ಅವರು ಪ್ರವಾಸದ ಮೇಲೆ ವಿದೇಶಕ್ಕೆ ಹೋಗಿರುವುದಾಗಿ ತಿಳಿಸುತ್ತಾಳೆ. ಆಪ್ತರಾದವರಿಗೆ ಇದು ತಿಳಿದಿರುವುದಿಲ್ಲವೇ? ಹೋಗಲಿ ಬಿಡಿ. ರಾಜ್ಯದ ಮುಖ್ಯಮಂತ್ರಿಯ ಚಲನವಲನಗಳನ್ನು ಆಪ್ತನಲ್ಲದಿದ್ದರೂ ಒಬ್ಬ ರಾಜಕೀಯ ಆಕಾಂಕ್ಷಿ ಮಾಧ್ಯಮಗಳಿಂದ ತಿಳಿದುಕೊಂಡಿರುವುದಿಲ್ಲವೇ?

2. ಜಾನಕಿ ತನ್ನ ಮಗಳಲ್ಲ ಎಂಬ ಗುಟ್ಟು ತನಗೆ, ತನ್ನ ಹೆಂಡತಿಗೆ ಮತ್ತು ಸಿಎಸ್‌ಪಿಗೆ ಬಿಟ್ಟು ಇನ್ನಾರಿಗೂ ತಿಳಿದಿಲ್ಲ ಎಂದು ಪಿಎಗೆ ತಿಳಿಸುತ್ತಾನೆ ಚಂದು ಬಾರ್ಗಿ. ಒಬ್ಬ ರಾಜಕೀಯ ಆಕಾಂಕ್ಷಿಯ ಜಾತಕವನ್ನು ಹೇಗೆ ಜಾಲಾಡುತ್ತಾರೆ ಮಾಧ್ಯಮದವರು ಎನ್ನುವುದನ್ನು ಈಗತಾನೆ ಮುಗಿದ ಚುನಾವಣೆಯಿಂದ ತಿಳಿಯಬಹುದು. ಹೀಗಿರುವಾಗ ಕೇವಲ ಇಪ್ಪತ್ತು ವರ್ಷಗಳ ಹಿಂದಿನ ಕಥೆಯನ್ನು, ಅದೂ ಒಬ್ಬ ಶ್ರೀಮಂತ ಉದ್ಯಮಿಯ ರಸವತ್ತಾದ ಕಥೆಯನ್ನು, ತೆಗೆಯಲಾರರೆ ಸಿಎಸ್‌ಪಿ ಮಾಧ್ಯಮ ಲೋಕದವರು!

ನೈಜತೆಯ ಛಾಯೆಯಲ್ಲಿ ಧಾರಾವಾಹಿಗಳನ್ನು ಮಾಡುವ ಖ್ಯಾತಿ ಪಡೆದಿರುವ ಸೀತಾರಾಂ ಅವರು ಇಂತಹ ಬೇಸಿಕ್ ತಪ್ಪುಗಳನ್ನು ಮಾಡಬಹುದೇ?

-ವಿನಯ್ ಎಂ.ಎಸ್., ಬೆಂಗಳೂರು